**ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಭವನದಲ್ಲಿ ದಿನಾಂಕ: 18-02-2026 ರಂದು ಸಂಜೆ 5.00 ಗಂಟೆಗೆ ನಡೆಸಿದ ಜಿಲ್ಲಾ ಮಟ್ಟದ Special Investigation Team (SIT) ತಂಡದ ಸಭೆಯ ನಡಾವಳಿಗಳು**

**ಉಪಸ್ಥಿತರು:**

1. ಶ್ರೀಮತಿ ಸ್ನೇಹಲ್ ಆರ್ ಭಾ.ಆ.ಸೇ, ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ.
2. ಶ್ರೀ ಭುವನೇಶ ಪಾಟೀಲ, ಭಾ.ಆ.ಸೇ, ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ
3. ಶ್ರೀ, ಶೇಖ್ ಅಬ್ದುಲ್ ಅಲೀಂ ಸಿಧ್ದಿಕಿ ಕ.ಅ.ಸೇ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ
4. ಶ್ರೀಮತಿ ಗೀತಾ ಸಿ ಡಿ, ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ.
5. ಶ್ರೀ ಶಾಲಂ ಹುಸೇನ್, ಉಪ ವಿಭಾಗಾಧಿಕಾರಿಗಳು, ಧಾರವಾಡ.
6. ಶ್ರೀ ಮೋಹನ ಶಿವಣ್ಣವರ, ಉಪ ನಿರ್ದೇಶಕರು, ಭೂ ದಾಖಲೆ, ಧಾರವಾಡ
7. ಶ್ರೀಮತಿ ಪರಿಮಳ ವಿ ಎಚ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ಉಪವಿಭಾಗ
8. ತಹಶೀಲ್ದಾರರು, ಹುಬ್ಬಳ್ಳಿ, ಹುಬ್ಬಳ್ಳಿ ಶಹರ, ಧಾರವಾಡ, ಅಳ್ನಾವರ, ಕಲಘಟಗಿ, ಅಣ್ಣಿಗೇರಿ ಕುಂದಗೋಳ ಹಾಗೂ ನವಲಗುಂದ.
9. ವಲಯ ಅರಣ್ಯಾಧಿಕಾರಿಗಳು, ಧಾರವಾಡ, ಹುಬ್ಬಳ್ಳಿ, ಕಲಘಟಗಿ ಹಾಗೂ ಅಳ್ನಾವರ ವಲಯ,

*********

ಸಭೆಗೆ ಸೇರಿದ್ದ ಎಲ್ಲ ಅಧಿಕಾರಿಗಳಿಗೆ ಹಾಗೂ ಸಭಾಧ್ಯಕ್ಷರಿಗೆ ಸಮಿತಿ ಪರವಾಗಿ ಶ್ರೀ ಶೇಖ್ ಅಬ್ದುಲ್ ಅಲೀಂ ಸಿಧ್ದಿಕಿ, ಕ.ಅ.ಸೇ ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ರವರು ಸ್ವಾಗತಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಬಗ್ಗೆ ವಿಷಯ ಪ್ರಸ್ತುತ ಪಡೆಸಲು ಅದೇಶಿಸಿದ ಮೇರೆಗೆ ಶ್ರೀ ಶೇಖ್ ಅಬ್ದುಲ್ ಅಲೀಂ ಸಿಧ್ದಿಕಿ, ಕ.ಅ.ಸೇ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ರವರು ಈ ಕೆಳಕಂಡಂತೆ ಸಭೆಯನ್ನುದ್ದೇಶಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಸದರಿ Special Investigation Team (SIT) ತಂಡ ಹಾಗೂ ಜಿಲ್ಲಾ ತಜ್ಞ ಸಮಿತಿಯ (District Expert Committee) ಯನ್ನು ರಚಿಸಿದ ಕಾರಣ ಹಾಗೂ ಅದರ ಧ್ಯೇಯೋದ್ದೇಶಗಳನ್ನು ಸಮಿತಿ/ ತಂಡಕ್ಕೆ ಮತ್ತೊಮ್ಮೆ ವಿವರಿಸಿದರು. ತದನಂತರ, ಮಾನ್ಯ ಸಭಾಧ್ಯಕ್ಷರು ಸದರಿ ತಂಡ ಸಾಧಿಸಿದ ಪ್ರಗತಿಯನ್ನು ಕೋರಿದರು. ಇದಕ್ಕುತ್ತರವಾಗಿ, CRFL ವೆಬ್ ಪೋರ್ಟಲ್‌ನಲ್ಲಿ ಧಾರವಾಡ ಜಿಲ್ಲೆಗೆ ಸಂಬಂಧಿಸಿದಂತೆ, ಒಟ್ಟು 6714 ಸರ್ವೇ ನಂಬರುಗಳನ್ನು ಪರಿಶೀಲಿಸಬೇಕಿದ್ದು, ಇದರಲ್ಲಿ, ಈಗಾಗಲೇ 1204 ಸರ್ವೇ ನಂಬರುಗಳನ್ನು ಪರಿಶೀಲಿಸಲಾಗಿರುತ್ತದೆ. ಸದರಿ 6714 ಸರ್ವೇ ನಂಬರುಗಳಲ್ಲಿ ಅಧಿಸೂಚಿತ ಅರಣ್ಯ ಪ್ರದೇಶಗಳು, (Notified Forests), ಸರ್ಕಾರಿ ದಾಖಲೆಗಳಲ್ಲಿ ಅರಣ್ಯವೆಂದು ನಮೂದಿಸಿದ ಪ್ರದೇಶಗಳು (Recorded Forests) ಹಾಗೂ ಸಂಭಾವ್ಯ (potential Forest like areas) ಅರಣ್ಯ ಪ್ರದೇಶಗಳು ಸೇರಿರುತ್ತವೆ.

ಸದರಿ ಸಮಿತಿಯ ಕಾರ್ಯದ ಪ್ರಥಮ ಭಾಗವಾಗಿ, ಯಾವುದೇ ಅರಣ್ಯ ಕಾಯ್ದೆಯ ಮುಖಾಂತರ ಅಧಿಸೂಚನೆಯಾಗಿರುವ ಅರಣ್ಯ ಪ್ರದೇಶಗಳ ಗ್ರಾಮವಾರು ಸರ್ವೇ ನಂಬರ್‌ಗಳನ್ನು CRFL portal ಪರಿಶೀಲಿಸುವುದು. ಸದರಿ 1139 ಅಧಿಸೂಚನೆಯಾಗಿರುವ ಅರಣ್ಯ ಪ್ರದೇಶಗಳ ಸರ್ವೇ ನಂಬರುಗಳಲ್ಲಿ ಈಗಾಗಲೇ 930 ಸರ್ವೇ ನಂಬರುಗಳನ್ನು ಪರಿಶೀಲಿಸಲಾಗಿದೆ, ಉಳಿದ 209 ಸರ್ವೇ ನಂಬರುಗಳನ್ನು ಶೀಘ್ರವೇ ಪರಿಶೀಲಿಸಲಾಗುವುದು ಎಂದು ಸಭೆಗೆ ತಿಳಿಸಿದರು. ಸದರಿ ಪರಿಶೀಲನಾ ಕಾರ್ಯವನ್ನು ಆದಷ್ಟು ಕೂಡಲೇ ಪೂರ್ಣಗೊಳಿಸಲು ಸಮಿತಿಯು ಉಪ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ರವರಿಗೆ ನಿರ್ದೇಶನ ನೀಡಲಾಯಿತು.

**ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ಇವರಿಗೆ.**

ಮುಂದುವರೆದು, ಉಪ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ರವರು CRFL ಪೋರ್ಟಲ್ ಪರಿಶೀಲಿಸಲಾಗಿ ಧಾರವಾಡ ಜಿಲ್ಲೆಯಲ್ಲಿ ಅಧಿಸೂಚನೆಯಾಗಿರುವ ಅರಣ್ಯ ಪ್ರದೇಶಗಳ ಸರ್ವೇ ನಂಬರುಗಳಲ್ಲಿ ಒಟ್ಟು 4922 ಪ್ರಕರಣಗಳಲ್ಲಿ ಕಂದಾಯ ಇಲಾಖೆಯ ಸ್ವಾಧೀನದಲ್ಲಿರುವ ಅರಣ್ಯ ಜಮೀನುಗಳನ್ನು ಅರಣ್ಯ ಉದ್ದೇಶಕ್ಕಾಗಿ ಹೊರತುಪಡಿಸಿ ಬೇರೆ ಉದ್ದೇಶಕ್ಕೆ ಹಂಚಿಕೆ ಮಾಡಿರುವುದು ಕಂಡುಬಂದಿರುತ್ತದೆ. ಮಾನ್ಯ ಸರ್ಕಾರದ Special Investigation Team (SIT) ಆದೇಶ ಮತ್ತು ಸುತ್ತೋಲೆಯಂತೆ ಪ್ರತಿಯೊಂದು ಪ್ರಕರಣಗಳನ್ನು ಪರೀಕ್ಷಿಸಿ, ಸುತ್ತೋಲೆ ಅನ್ವಯ ಕ್ರಮಕೈಗೊಳ್ಳಬೇಕಾಗಿರುತ್ತದೆ ಎಂದು ಸಮಿತಿಗೆ ಮನದಟ್ಟು ಮಾಡಲಾಯಿತು ಹಾಗೂ ಸದರಿ ಪ್ರಕರಣಗಳ ಪಟ್ಟಿಯನ್ನು ಸಮಿತಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಯಿತು.

ಇದಕ್ಕೆ ಸಭಾಧ್ಯಕ್ಷರು, ಉಪವಿಭಾಗಾಧಿಕಾರಿಗಳಿಗೆ ಹಾಗೂ ಎಲ್ಲ ತಹಶೀಲ್ದಾರರಿಗೆ 4922 ನಂಬರುಗಳಿಗೆ ಸಂಭಂಧಿಸಿದ ಹಂಚಿಕೆ ಮಾಡಿದ ಆದೇಶ ಸಂಖ್ಯೆ, ವರ್ಷ, ಪ್ರಾಧಿಕಾರ ಇತ್ಯಾದಿ ದಾಖಲೆಗಳನ್ನು ಒಂದು ವಾರದೊಳಗೆ ಸೃಜಿಸಿ, ಸಮಿತಿಗೆ ಸಲ್ಲಿಸಲು ಸೂಚಿಸಿದರು.

**ಕ್ರಮ: ಕಂದಾಯ ಅಧಿಕಾರಿಗಳಿಗೆ** (ಉಪವಿಭಾಗಾಧಿಕಾರಿಗಳಿಗೆ ಹಾಗೂ ಎಲ್ಲ ತಹಶೀಲ್ದಾರರಿಗೆ)

ಮುಂದುವರೆದು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸದರಿ ಸಮಿತಿಯ ಮುಂದಿನ ಭಾಗವಾದ ಸರ್ಕಾರಿ ದಾಖಲೆಗಳಲ್ಲಿ ಅರಣ್ಯವೆಂದು ನಮೂದಿಸಿದ ಪ್ರದೇಶಗಳು (Recorded Forests) ಹಾಗೂ ಸಂಭಾವ್ಯ (potential Forest like areas) ಅರಣ್ಯ ಪ್ರದೇಶಗಳ ಬಗ್ಗೆ ವಿವರಿಸಲು ಅನುಮತಿ ಕೋರಿದಾಗ ಮಾನ್ಯ ಸಭಾಧ್ಯಕ್ಷರು, ಸದರಿ ಸಮಿತಿಯ ಮೊದಲ ಭಾಗವನ್ನು ಪೂರ್ಣಗೊಳಿಸಿದ ನಂತರ ಮುಂದಿನ ಭಾಗವನ್ನು ಕೈಗೆತ್ತಿಕೊಳ್ಳಲು ಸೂಚಿಸಿದರು.

ಮುಂದುವರೆದು, ಮಾನ್ಯ ಸಭಾಧ್ಯಕ್ಷರು, ಮುಂದಿನ ವಾರದಲ್ಲಿ ಸಮಿತಿಯು ಇನ್ನೊಂದು ಸಭೆಯನ್ನು ಕರೆಯಲಾಗುವುದು, ಕಾರಣ, ಎಲ್ಲ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಕ್ರಮಕೈಗೊಂಡು ಸಭೆಗೆ ಹಾಜರಾಗಲು ಸೂಚಿಸಿದರು.

ಸದರಿ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು
ಹಾಗೂ ಜಿಲ್ಲಾ ದಂಡಾಧಿಕಾರಿಗಳು,
ಧಾರವಾಡ ಜಿಲ್ಲೆ
ಹಾಗೂ ಅಧ್ಯಕ್ಷರು

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಧಾರವಾಡ
ಹಾಗೂ ಸದಸ್ಯರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ.

ಉಪ ನಿರ್ದೇಶಕರು,
ಭೂದಾಖಲೆ,
ಹಾಗೂ ಸದಸ್ಯರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ.

Aleem

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
ಧಾರವಾಡ ವಿಭಾಗ, ಧಾರವಾಡ
ಹಾಗೂ ಸಂಚಾಲಕರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ

ಜಂಟಿ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,,
ಹಾಗೂ ಸದಸ್ಯರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ.